ಶಾಪೂರುಗೆ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸೂರಪುರಕ್ಕೆ 50 ಸಾವಿರ ರೂಪಾಯಿ ಗಳನ್ನು ಕೊಟ್ಟಿದ್ದೇವೆ. ವಾಡಿಗೆ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ ಯಾದಗಿರಿಗೆ ಸುಮಾರು 50 ಸಾವಿರ ರೂಪಾಯಿ ಕೊಟ್ಟಿದ್ದೇವೆ. ಮತ್ತೆ 1982–83ನೇ ಸಾಲಿನಲ್ಲಿ ಶಹಬಾದ್‌ಗೆ 50 ಸಾವಿರ ರೂಪಾಯಿ, ಶಾಪೂರುಗೆ 50 ಸಾವಿರ ರೂಪಾಯಿ, ಸೇಡಂಗೆ 1ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಚಿಂಚೋಳಿಗೆ 1 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಚಿತಾಪುರಕ್ಕೆ 1ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದೇವೆ. ಗುರುಮಟ್‌ಕಲ್‌ಗೆ 1ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಯಾದಗಿರಿಗೆ 1ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆಲಂದಗೆ ಸುಮಾರು 2ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಜವರಗಿಗೆ ಸುಮಾರು 1ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ಶಹಬಾದಿನಲ್ಲಿ ಸುಮಾರು 16 ಸಾವಿರ ಜನಸಂಖ್ಯೆ ಇದ್ದಾರೆ. ಆದರೆ ಅಲ್ಲಿಗೆ ಸುಮಾರು 50 ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಆದಕ್ಕಿಂತ ಕಡಿಮೆ ಪ್ರದೇಶದ ಜನಸಂಖ್ಯೆಗೆ ಸುಮಾರು ಜಾಸ್ತಿ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ಶಹಬಾದ್‌ಗೆ ಸುಮಾರು 1 ಲಕ್ಷ ರೂಪಾಯಿಗಳನ್ನಾದರೂ ಕೊಡುತ್ತೀರಾ?

ಶ್ರೀ ಎಂ. ಚಂದ್ರಶೇಖರ. — ಸ್ವಾಮಿ ನಾವು ಎಲ್ಲಾ ಮುನಿಸಿಪಾಲಿಟಿಗಳಿಗೂ ಸೇರಿ ಸುಮಾರು 35ಕೋಟಿ ರೂಪಾಯಿಗಳ ರಿವ್ಯೂ ಕೊಟ್ಟಿದ್ದೇವೆ. ನಾನು 3ವರ್ಷಗಳ ಅಂಕಿ ಅಂಶಗಳನ್ನು ಸೇರಿಸಿ ಕೊಟ್ಟಿದ್ದೇನೆ. ಆದರೆ 1983-84ನೇ ಸಾಲಿನಲ್ಲಿ ಏನಾದರೂ ಯೋಚನೆ ಮಾಡೋಣ.

ಅಗತ್ಯ ವಸ್ತುಗಳ ಕಾಯಿದೆಯ ವ್ಯಾಪ್ತಿ

ಪ್ರಶ್ನೆ : 31(78) ಶ್ರೀ ಬಿ ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಆಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಸೇಂದಿ, ಸಾರಾಯಿ ಅಗತ್ಯ ವಸ್ತುಗಳು ಸರಬರಾಜಿಗೆ ಸಂಬಂಧಿಸಿದ ಕಾನೂನಿನ ವ್ಯಾಪ್ತಿಗೆ ಒಳಪಡುತ್ತದೆಯೆ;

ಆ) ಹಾಗಿದ್ದಲ್ಲಿ ಇದುವರೆವಿಗೂ ಯಾವ ತಾಲ್ಲೂಕುಗಳಲ್ಲಿ ಎಷ್ಟು ನಮೂನೆಗಳನ್ನು ಈ ಕಾಯಿದೆಯ ಅನುಗುಣವಾಗಿ ಪರಿಶೀಲನೆಗೆ ಕ್ರಮ ತೆಗೆದುಕೊಳ್ಳಲಾಗಿದೆ?

ಉತ್ತರ : ಶ್ರೀ ಜೆ.ಹೆಚ್. ಪಟೇಲ್ (ಆಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).— ಅ) ಇಲ್ಲ. ಆ) (ಅ)ಗೆ ಉತ್ತರ ಕೊಟ್ಟಿರುವ ಪ್ರಕಾರ, ಈ ಪ್ರಶ್ನೆಯು ಉದ್ಭವಿಸುವುದಿಲ್ಲ. ಇದು ಕೇಂದ್ರ ಸರ್ಕಾರದ ಕಾನೂನಿನ ವ್ಯಾಪ್ತಿಯಲ್ಲಿ ಬರುವುದರಿಂದ ನಮ್ಮ ಸರ್ಕಾರದ ದೃಷ್ಟಿಯಲ್ಲಿ ಅಗತ್ಯ ವಸ್ತುವಾಗಿ ನಾವು ಭಾವಿಸಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಬಿ ಹೆಚ್. ಯಂಕಾನಾಯ್ಕ.— ಸ್ವಾಮಿ ಇವತ್ತು ಸೇಂದಿ ಮತ್ತು ಸಾರಾಯಿಯನ್ನು ಸರ್ಕಾರದ ಪರವಾನಿಗೆ ಪಡೆದು ಮಾರಾಟ ಮಾಡಬೇಕೆಂದು ನಿಯಮವಿದೆ. ಆದರೆ ಸರ್ಕಾರದ ಪರವಾನಿಗೆ ಇಲ್ಲದೆ ಸಾರಾಯಿ ಮತ್ತು ಸೇಂದಿಯನ್ನು ಶಾಲಾ ಕಟ್ಟಡಗಳ ಮುಂಭಾಗದಲ್ಲಿ ಮತ್ತು ಹರಿಜನ ಕೇರಿಗಳಲ್ಲಿ ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಅಲ್ಲಿನ ವಾತಾವರಣ ಹದ ಗೆಡುತ್ತಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಅಧ್ಯಕ್ಷರು.— ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ ಇಲ್ಲಿ ಇರುವಂಥ ಪ್ರಶ್ನೆಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಕೆ. ಮಲ್ಲಪ್ಪ — ಮಾನ್ಯ ಅಧ್ಯಕ್ಷರೇ, ಇದು ಅಗತ್ಯವಸ್ತುವಲ್ಲದ ಮೇಲೆ ಸರ್ಕಾರದವರು ಇದನ್ನು ರದ್ದು ಮಾಡಬಹುದಲ್ಲವೇ?

ಶ್ರೀ ಜೆ ಹೆಚ್. ಪಟೇಲ್.— ಇದು ಸರ್ಕಾರದ ದೃಷ್ಟಿಯಲ್ಲಿ ಅಂದರೆ ರಾಜ್ಯ ಸರ್ಕಾರಕ್ಕೆ ಸಂಬಂಧವಿರುವುದಿಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ಅಗತ್ಯವೆಂದು ಕಂಡುಬಂದರೆ ಅವರಿಗೆ ತಕ್ಕಂಥ ಅನುಕೂಲ ಮಾಡಿಕೊಳ್ಳಬಹುದು.

ಬೆಳಗಾಂವಿ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ ನೆರೆಯ ಪ್ರಭಾವ

ಪ್ರಶ್ನೆ : 32(62) ಶ್ರೀ ಎಸ್. ಎಸ್. ಪಾಟೀಲ್ (ಬಿಳಗಿ), ಮತ್ತು ಬಿಬಿ ಚಿಮನ ಕಟಿ (ಬಾದಾಮಿ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಇತ್ತೀಚಿನ ಮಹಾಪುರದಿಂದ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಯಲ್ಲಿ ನೊಂದ ಕುಟುಂಬಗಳ ಸಂಖ್ಯೆ ಎಷ್ಟು;

ಆ) ಇದರಿಂದ ಆದ ಆಸ್ತಿಯ ಅಂದಾಜು ಹಾನಿ ಎಷ್ಟು ಹಾಗೂ ಸತ್ತವರ ಸಂಖ್ಯೆ ಎಷ್ಟು;

ಇ) ನೊಂದ ಕುಟುಂಬದವರಿಗೆ ಪುನರ್ವಸತಿಗಾಗಿ ಸರ್ಕಾರದವರು ಮಾಡಿದ ವೆಚ್ಚವೇನು;

ಈ) ಕೇಂದ್ರ ಸರ್ಕಾರದಿಂದ ಏನಾದರೂ ಸಹಾಯವನ್ನು ಕೇಳಲಾಗಿದೆಯೇ ಹಾಗಿದ್ದಲ್ಲಿ ಅದರ ಪರಿಣಾಮವೇನು;

ಉ) ಅಂದಾಜು ಬೀಳು ನಾಶವಾದದ್ದರ ಮೊತ್ತವೇನು?

ಉತ್ತರ ; ವಿ ಎಲ್ ಪಾಟೀಲ್ (ಕಂದಾಯ ಮಂತ್ರಿಗಳು) — ಅ) 3318 ಕುಟುಂಬಗಳು ಒಳಪಟ್ಟಿವೆ ಮತ್ತು 9 ಜನರು ಮೃತ ಪಟ್ಟಿರುತ್ತಾರೆ.

ಆ) 9 ಜನರು ಮೃತಪಟ್ಟಿರುವರು ಮತ್ತು ಒಟ್ಟು ಪಾನಿಯಾದ ಆಸ್ತಿಯ ಅಂದಾಜು ರೂ. 263-66 ಲಕ್ಷವಿದೆ.

ಇ) ಕರ್ನಾಟಕ ಸರ್ಕಾರವು ಈವರೆವಿಗೆ ರೂ 75-00 ಲಕ್ಷ ನೊಂದ ಕುಟುಂಬದವರಿಗೆ ಪರಿಹಾರ ಹಾಗೂ ವಸತಿಗಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ

ಈ) ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ನೆರೆ ಹಾವಳಿಯ ಬಗ್ಗೆ ಪ್ರಸ್ತಾವನೆಯನ್ನು ದಿನಾಂಕ 19-7-83ರಂದು ಸಲ್ಲಿಸಿ ರೂ. 7.60ಕೋಟಿ ರೂಪಾಯಿಗಳನ್ನು ಕೇಳಿರುವರು ಈವರೆವಿಗೂ ಹಣವು ಬಂದಿರುವುದಿಲ್ಲ. ಆದರೆ ಮಾನ್ಯ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ರೂ. 3-00 ಲಕ್ಷ ಬಿಡುಗಡೆ ಮಾಡಿದ್ದಾರೆ.

ಉ) ರೂ. 95,92,500 ಅಂದಾಜು ಮಾಡಲಾಗಿದೆ.

ಶ್ರೀ ಎಸ್ ಎಸ್. ಪಾಟೀಲ್ — ಮಾನ್ಯ ಮಂತ್ರಿಗಳು ಕೊಟ್ಟಿಂತಹ ಉತ್ತರಗಳನ್ನು ನೋಡಿ ಪಾಗ ನನಗನಿಸುತ್ತದೆ ಅವರು ಸ್ಥಳಕ್ಕೆ ಭೇಟಿಕೊಟ್ಟು ಉತ್ತರವನ್ನು ಕೊಡುತ್ತಿದ್ದಾರೋ ಅಥವಾ ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನು ಕೊಡುತ್ತಿದ್ದಾರೋ ಎಂಬುದು ತಿಳಿಸಿದರೆ ಒಳ್ಳೆಯದು.

ಶ್ರೀ ವಿ ಎಲ್. ಪಾಟೀಲ್.— ನಮ್ಮ ಅಧಿಕಾರಿಗಳ ಜೊತೆಯಲ್ಲಿ ನಾನು ಭೇಟಿ ಮಾಡಿ ಸ್ಥಳ ವನ್ನು ಪರೀಕ್ಷೆ ಮಾಡಿ ಅಲ್ಲಿ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಂಥ ಜನರನ್ನು ಹೆಲಿಕ್ಯಾಪ್ಟರ್‌ನಲ್ಲಿ ಸಾಗಿಸಿ ಬಂದಿದ್ದೇವೆ. ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಕೂಡ ನಾವು ಸಮಾ ಲೋಚನೆ ಮಾಡಿದ್ದೇವೆ. ಮತ್ತು ಅಲ್ಲಿಗೆ ಬೇಕಾದಷ್ಟು ಹಣವನ್ನು ಕೂಡ ಕೊಟ್ಟಿದ್ದೇವೆ.

ಅಧ್ಯಕ್ಷರು — ಪ್ರಶ್ನೋತ್ತರ ವೇಳೆ ಮುಗಿಯಿತು.

ಪ್ರವಾಹದಿಂದಾಗಿ ರಾಮದುರ್ಗ ತಾಲ್ಲೂಕಿನ ಗ್ರಾಮಗಳನ್ನು ಸ್ಥಳಾಂತರಿಸುವುದು

ಪ್ರಶ್ನೆ : 23 (58) ಶ್ರಿ.ಎಫ್.ಎ. ಕೊಪ್ಪದ್ (ರಾಮದುರ್ಗ) — ಮಾನ್ಯ ಕಂದಾಯ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಮದ ರ್ಗ ತಾಲ್ಲೂಕಿನ ಮಲಪ್ರಭಾ ನದಿಯ ಪ್ರವಾಹಕ್ಕೆ ಒಳಗಾಗುವ ಗೊನ್ನಾವರ, ಹಂಪಿಹೋಳಿ, ಸುನ್ನಾಳ ಈ ಗ್ರಾಮಗಳನ್ನು ಸ್ಥಳಾಂತರಿಸುವ ಬಗ್ಗೆ ಸರಕಾರದವರು ಯೋಚಿಸಿ ದ್ದಾರೆಯೆ;

ಆ) ಸ್ಥಳಾಂತರಿಸುವ ಕಾರ್ಯಕ್ರಮ ಈಗ ಯಾದ ಹಂತದಲ್ಲಿದೆ ?

ಉತ್ತರ: ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) .—ಅ) ಪರಿಶೀಲನೆಯಲ್ಲಿದೆ.

ಆ) ಗೊನ್ನಾವರ ಗ್ರಾಮದ ಸಲುವಾಗಿ ಭೂಸ್ವಾಧೀನ ಕಾಯ್ದೆಕಲಂ 11ರ ಪ್ರಕಾರ 35 ಎಕರೆ 8 ಗುಂಟೆ 15 1/2 ಆಣೆ ಜಮೀನನ್ನು ಸ್ವಾಧೀನ ಪಡಿಸಿ ಕೊಂಡು ಅವರೆಲ್ಲಿ ನಿವೇಶನಗಳನ್ನು ನಿರ್ಮಿಸಿ 1974ರಲ್ಲಿ ಗ್ರಾಮದ ಜನರಿಗೆ ಹಂಚಲಾಗಿದೆ.

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಂದ 20 ಜನತಾ ಮನೆಗಳು ಈ ಜಮೀನಿನಲ್ಲಿ ಮಂಜೂರು ಮಾಡ ಲ್ಪಟ್ಟಿರುತ್ತವೆ. ಈ ಜನರು ಅಲ್ಲಿ ಈಗ ವಾಸಿಸಿರುತ್ತಿದ್ದಾರೆ. ಉಳಿದ ಜನರಿಗೆ ಅಲ್ಲಿಗೆ ಹೋಗಿ ನಿಲ್ಲಲು ವಿನಂತಿಸಿಕೊಳ್ಳಲಾಗುತ್ತಿದೆ.

ಹಂಚಿಹೊಳಿ ಮತ್ತು ಸುನ್ನಾಳ ಗ್ರಾಮಗಳ ಸಲುವಾಗಿ ಭೂಸ್ವಾಧೀನ ಪ್ರಕರಣಗಳನ್ನು ಇನ್ನು ಪ್ರಾರಂಭ ಮಾಡಬೇಕಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೂಡಲೇ ಕೈಗೊಳ್ಳಲಾಗುವುದು.

ಕರ್ನಾಟಕ ಭೂಸುಧಾರಣೆಯ ಕಾಯ್ದೆಯ ಮೇರೆಗೆ ಗೇಣಿದಾರರ ಹಕ್ಕು

ಪ್ರಶ್ನೆ : 33 (50) ಡಾ ವಿ. ಎಸ್. ಆಚಾರ್ಯ (ಉಡುಪಿ).— ಮಾನ್ಯ ಕಂದಾಯಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲಗೇಣಿದಾರರಿಗೆ, ಆಸ್ತಿಮೂರಾಟದ ಹಕ್ಕನ್ನು ಹಿಂದೆ ಇದ್ದುದು ಕೆ.ಎಲ್. ಆಕ್ಟ್ ಜಾರಿಗೆ ಬಂದನಂತರ ಮೊಟಕಾಗಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದರೆ ರೈತರಿಗೆ ಈ ಮೊಟಕಾಗಿರುವ ಹಕ್ಕನ್ನು ಊರ್ಜಿತ ಗೊಳಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ;

ಇ) ಕೆ.ಎಲ್. ಆಕ್ಟ್‌ನ ಪ್ರಕಾರ ಅನುಭೋಗದಾರನೆಂದು ನೊಂಧಾಯಿಸಲ್ಪಟ್ಟವರಿಗೆ ಈ